# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/ಪಿಆರ್/ /2016-17
292

ಆಯುಕ್ತರು ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:20.04.2016.

**:: ಕಛೇರಿ ಆದೇಶ ::**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವ್ಯಾಪ್ತಿಯಲ್ಲಿ 750 ಮನೆಗಳಿಗೆ ಒಂದರಂತೆ ಆಟೋ ಟಿಪ್ಪರ್‌ಗಳನ್ನು ನಿಗದಿಸುವ ಹಾಗೂ ಗೈರು ಹಾಜರಿ ಸಂದರ್ಭದಲ್ಲಿ Standby ಆಟೋ ಟಿಪ್ಪರ್‌ಗಳನ್ನು ವ್ಯವಸ್ಥೆ ಮಾಡುವ ಕುರಿತು.

ಉಲ್ಲೇಖ: ವಿ.ಆ(ಘ.ತ್ಯಾ.ನಿ)ಪಿ.ಆರ್/65/2015-16 ದಿನಾಂಕ: 26-02-2016

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಮನೆಮನೆ ಕಸ ಸಂಗ್ರಹಣೆಯನ್ನು ಆಟೋ ಟಿಪ್ಪರ್‌ಗಳ ಮುಖಾಂತರ ಮಾಡಲಾಗುತ್ತಿರುತ್ತದೆ. 750 ಮನೆಗಳಿಗೆ ಒಂದರಂತೆ ಆಟೋ ಟಿಪ್ಪರ್‌ಗಳನ್ನು ನಿಗಧಿ ಮಾಡಿ ಮನೆಮನೆಯಿಂದ ಕಸ ಸಂಗ್ರಹಣೆಯನ್ನು ವ್ಯವಸ್ಥಿತವಾಗಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದೆ. ಪ್ರತಿನಿತ್ಯ ವಾರ್ಡ್‌ವಾರು ಮನೆಮನೆಯಿಂದ ಕಸ ಸಂಗ್ರಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ನಿಗಧಿ ಮಾಡಿರುವ ಆಟೋ ಟಿಪ್ಪರ್ ಸಂಖ್ಯೆಗಳಲ್ಲಿ ಕೆಲವು ಗೈರು ಹಾಜರಾದ ಸಂದರ್ಭದಲ್ಲಿ, ನಿಗಧಿಗಿಂತ ಕಡಿಮೆ ಸಂಖ್ಯೆಯಲ್ಲಿ ಆಟೋ ಟಿಪ್ಪರ್‌ಗಳು ಕಾರ್ಯನಿರ್ವಹಿಸುವ ಸ್ಥಿತಿ ನಿರ್ಮಾಣಗೊಳ್ಳುತ್ತದೆ. ಈ ಸಂದರ್ಭಗಳಲ್ಲಿ ಒಂದು ಆಟೋ 750 ಕ್ಕಿಂತ ಹೆಚ್ಚು ಮನೆಗಳಿಂದ ಕಸ ಸಂಗ್ರಹಣೆ ಮಾಡುವ ಸಂದರ್ಭ ನಿರ್ಮಾಣಗೊಂಡು, ಮನೆಗಳ ಕಸವನ್ನು ಸಂಪೂರ್ಣವಾಗಿ ಸಂಗ್ರಹಿಸುವ ಕಾರ್ಯವು ವಿಫಲವಾಗುತ್ತಿರುತ್ತದೆ ಮತ್ತು ದಿನನಿತ್ಯದ ಕಸವು ಬಾಕಿ ಉಳಿದು ರಸ್ತೆ ಮತ್ತು ಸಾರ್ವಜನಿಕ ಸ್ಥಳದಲ್ಲಿ ಸಂಗ್ರಹಗೊಳ್ಳುತ್ತದೆ. ಈ ರೀತಿ ಸನ್ನಿವೇಶಗಳು ಉದ್ಭವವಾಗದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ, ಪ್ರತಿದಿನ ಗೈರು ಹಾಜರಾಗುವ ಮತ್ತು ವಾರ್ಡ್‌ಗಳಲ್ಲಿ ನಿಗಧಿಯಾಗಿರುವ ಆಟೋ ಟಿಪ್ಪರ್‌ಗಳಿಗಿಂತ ಕಡಿಮೆ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಆಟೋ ಟಿಪ್ಪರ್‌ಗಳ ಸರಾಸರಿ ತೆಗೆದುಕೊಂಡು ಆಟೋ ಟಿಪ್ಪರ್ ಸಂಖ್ಯೆಗಳಿಗೆ ತಕ್ಕಂತೆ ಪೂರ್ವ ಯೋಜನೆಯೊಂದಿಗೆ Standby ಆಟೋ ಟಿಪ್ಪರ್‌ಗಳನ್ನು ನಿಗಧಿ ಮಾಡಿ ಕಾರ್ಯನಿರ್ವಹಿಸುವುದು. ಈ ರೀತಿ Standby ಆಟೋಗಳನ್ನು ಯಾವುದೇ ಅಧಿಕ ಹಣ ಪಾವತಿಸದೇ ಸರಬರಾಜುದಾರರು/ಗುತ್ತಿಗೆದಾರರಿಂದ ಪಡೆಯುವುದು ಅಥವಾ ಇಲಾಖೆ ವತಿಯಿಂದ ವ್ಯವಸ್ಥೆ ಮಾಡಿ ಸರಬರಾಜುದಾರರು/ಗುತ್ತಿಗೆದಾರರಿಂದ ಇದಕ್ಕೆ ತಗಲುವ ವೆಚ್ಚವನ್ನು ಸದರಿಯವರಿಗೆ ನೀಡುವ ಬಿಲ್ಲಿನ

ಮೊತ್ತದಲ್ಲಿ ಕಟ್ಟಾವು ಮಾಡಿ ಪಾವತಿಸುವುದು. ಈ ಸಂಬಂಧ ಸರಬರಾಜುದಾರರು/ಗುತ್ತಿಗೆದಾರರಿಗೆ ನಿರ್ದೇಶನ ನೀಡಲು ವಲಯ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು ಸಾರ್ವಜನಿಕರ ಹಿತದೃಷ್ಟಿಯಿಂದ ಜರೂರಾಗಿ ಕ್ರಮ ಕೈಗೊಳ್ಳುವುದು. ಸದರಿ ಆದೇಶವು ಹೊಸ ಟೆಂಡರ್ ಚಾಲ್ತಿಗೆ ಬರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಅನ್ವಯವಾಗುತ್ತದೆ.

ಆಯುಕ್ತರು
ಬಿಬಿಎಂಪಿ

<u>ಪ್ರತಿಯನ್ನು</u>

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆಧ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ವಿಶೇಷ ಆಯುಕ್ತರು (ಘ.ತ್ಯಾ.ನಿ./ಆ)) ರವರಿಗೆ
5. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘ.ತ್ಯಾ.ನಿ.) ರವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
6. ಮುಖ್ಯಅಭಿಯಂತರರು (ಘ.ತ್ಯಾ.ನಿ.) ಮುಂದಿನ ಅಗತ್ಯ ಕ್ರಮಕ್ಕಾಗಿ.
7. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ.
8. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಕಳುಹಿಸುತ್ತಾ ಅಗತ್ಯ ಕ್ರಮಕ್ಕಾಗಿ.
9. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಕಳುಹಿಸುತ್ತಾ ಅಗತ್ಯ ಕ್ರಮಕ್ಕಾಗಿ.
10. ಕಛೇರಿ ಕಡತಕ್ಕೆ.